ವಿಷಯ : ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ವರ್ಷ ಹಿಂದುಳಿದ ವರ್ಗಗಳ ಹಾಸ್ಟಲ್ ಪ್ರಾರಂಭಿಸುವ ಕುರಿತು

ಪ್ರಶ್ನೆ 5 (30) ಡಾ॥ ವಿ. ಎಸ್. ಆಚಾರ್ಯ (ಉಡುಪಿ).—ಮಾನ್ಯ ಸಹಕಾರ ಕಲ್ಯಾಣ ಹಾಗೂ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ. —

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ವರ್ಷ ಹೊಸದಾಗಿ ಹಿಂದುಳಿದ ವರ್ಗಗಳ ಹಾಸ್ಟೆಲುಗಳನ್ನು ಮಂಜೂರು ಮಾಡಲಾಗಿದೆಯೇ ;

ಆ) ಹಾಗಿದ್ದಲ್ಲಿ ಅವುಗಳ ಸಂಖ್ಯೆ ಎಷ್ಟು ; ಮತ್ತು ಅವು ಯಾವ ಸ್ಥಳಗಳಲ್ಲಿವೆ ;

ಇ) ಈಗಾಗಲೆ ಇರುವ ಹಾಸ್ಟೆಲುಗಳ ಪೈಕಿ ಎಷ್ಟು ಹಾಸ್ಟೆಲುಗಳಿಗೆ ಸ್ವಂತ ಕಟ್ಟಡಗಳಿವೆ ಹಾಗೂ ಈ ವರ್ಷ ಸದರಿ ಹಾಸ್ಟೆಲುಗಳಿಗಾಗಿ ಎಷ್ಟು ಕಟ್ಟಡಗಳನ್ನು ಕಟ್ಟಲಾಗುವುದು ?

ಉತ್ತರ.—ಶ್ರೀ ರಾಜವರ್ಧನ್ (ಸಮಾಜ ಕಲ್ಯಾಣ ರಾಜ್ಯ ಸಚಿವರು).—ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಮಂಗಳೂರಿನಲ್ಲಿರುವ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯದ ಕಟ್ಟಡ ಹೊರತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ವಿದ್ಯಾರ್ಥಿನಿಲಯಗಳು ಸದ್ಯಕ್ಕೆ ಖಾಸಗಿ ಕಟ್ಟಡಗಳಲ್ಲಿ ಬಾಡಿಗೆಯಲ್ಲಿ ನಡೆಯುತ್ತಿವೆ. 1982–83 ನೇ ಸಾಲಿನಲ್ಲಿ ಎಸ್. ಆರ್. ಇ. ಪಿ ಕಾರ್ಯಕ್ರಮದಲ್ಲಿ 8 ಕಟ್ಟಡಗಳನ್ನೂ ವಿದ್ಯಾರ್ಥಿನಿಲಯದ ಉಪಯೋಗಕ್ಕಾಗಿ ಕಟ್ಟಲಾಗಿದೆ, ಮತ್ತು ಸದ್ಯದಲ್ಲಿಯೇ ಈ ಕಟ್ಟಡಗಳಿಗೆ ವಿದ್ಯಾರ್ಥಿನಿಲಯಗಳನ್ನು ಸ್ಥಳಾಂತರ ಮಾಡಲಾಗುವುದು. 1983–84ನೇ ಸಾಲಿನಲ್ಲಿ ಎಸ್. ಆರ್. ಇ. ಪಿ. ಕಾರ್ಯಕ್ರಮದ ಮೂಲಕ ಕುಂದಾಪುರ ತಾಲ್ಲೂಕಿನ ಕೇದೂರು ಗ್ರಾಮದಲ್ಲಿ ವಿದ್ಯಾರ್ಥಿನಿಲಯ ಕಟ್ಟುವ ಕಾರ್ಯಕ್ರಮ ಹಾಕಲಾಗಿದೆ.

ವಿಷಯ : ಕೈಗಾರಿಕಾ ಉದ್ಯೋಗ ಸ್ಥಾಯಿ ಆದೇಶಗಳ ಶಾಸನದ ವ್ಯಾಪ್ತಿಗೊಳಪಡುವ ರಾಜ್ಯದಲ್ಲಿನ ಕಂಪನಿಗಳು ಹಾಗೂ ಕಾರ್ಖಾನೆಗಳು

ಪ್ರಶ್ನೆ 7(44) ಶ್ರೀ ಎಂ. ಎಸ್. ಕೃಷ್ಣನ್. (ರಾಜಾಜಿನಗರ).—ಕಾರ್ಮಿಕ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ.—

ಅ) 1936ರ ಇಂಡಸ್ಟ್ರಿಯಲ್ ಎಂಪ್ಲಾಯ್‌ಮೆಂಟ್ ಸ್ಟ್ಯಾಂಡಿಂಗ್ ಆರ್ಡರ್‌ಗಳ ಕಾನೂನಿನ ಅಡಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಎಷ್ಟು ಕಂಪನಿಗಳು ಅಥವಾ ಫ್ಯಾಕ್ಟರಿಗಳು ಬರುತ್ತವೆ ;

ಆ) ಎಷ್ಟು ಕಂಪನಿಗಳು ಮತ್ತು ಫ್ಯಾಕ್ಟರಿಗಳು ಸ್ಥಾಯಿ ನಿಯಮಗಳನ್ನು ಪ್ರಮಾಣೀಕರಣಕ್ಕೆ ಒಪ್ಪಿಸಿದ್ದಾರೆ ;

ಇ) ಎಷ್ಟು ಸ್ಥಾಯಿ ನಿಯಮಗಳನ್ನು ಇದುವರೆಗೆ ಪ್ರಮಾಣೀಕರಣ ಮಾಡಲಾಗಿದೆ ;

ಈ) ಎಷ್ಟು ಸ್ಥಾಯೀ ನಿಯಮಗಳನ್ನು ಇನ್ನೂ ಪ್ರಮಾಣೀಕರಣಗೊಳಿಸಬೇಕಾಗಿದೆ ;

ಉ) ಈ ಬಗ್ಗೆ ಇರುವ ಸ್ಥಾಯೀ ನಿಯಮಗಳು ಎಷ್ಟು ವರ್ಷಗಳಿಂದ ಬಾಕಿ ಇವೆ ?

ಉತ್ತರ.—ಶ್ರೀ ಅಜೀಜ್ ಸೇಟ್ (ಕಾರ್ಮಿಕ ಮಂತ್ರಿಗಳು) :—

ಅ) ಅಂತಹ ಸಂಸ್ಥೆಗಳ ಅಂದಾಜು ಸಂಖ್ಯೆ : 1273

ಆ) 806 ಇ) 30–6–1983ರಲ್ಲಿದ್ದಂತೆ 732

ಈ) 30–6–1983 ರಲ್ಲಿದ್ದಂತೆ 74

ಉ) 10 ವರ್ಷದಿಂದ ಹೆಚ್ಚಿಗೆ — ಇಲ್ಲ, 5 ರಿಂದ 10 — 23, 1 ರಿಂದ 5 — 51

ವಿಷಯ : ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಪುನರ್‌ರಚನೆ

ಪ್ರಶ್ನೆ 9(15) ಶ್ರೀ ಗೋವಿಂದ ಒಡೆಯರಾಜ್ (ಕಮಲಾಪುರ) —ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ.—

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ನಷ್ಟದಲ್ಲಿ ನಡೆಯುತ್ತಿರುವುದು ನಿಜವೆ ;

ಆ) ಈ ನಷ್ಟವನ್ನು ತುಂಬಲು ಕರ್ನಾಟಕ ಸರ್ಕಾರ ತೆಗೆದುಕೊಂಡ ಕ್ರಮವೇನು ;

ಇ) ಸರಕಾರವು ರಸ್ತೆ ಸಾರಿಗೆ ಸಂಸ್ಥೆಯನ್ನು ಪುನರ್‌ವ್ಯವಸ್ಥೆಗೊಳಿಸುವ ಬಗ್ಗೆ ಆಲೋಚಿಸಿದೆಯೆ ;

ಈ) ಹಾಗಿದ್ದಲ್ಲಿ ಹೇಗೆ ಮತ್ತು ಯಾವಾಗ ;

ಉ) ಆಗದಿದ್ದಲ್ಲಿ ಕಾರಣಗಳೇನು ?

ಉತ್ತರ.—ಶ್ರೀ ಎಂ. ಪಿ. ಪ್ರಕಾಶ್ (ಸಾರಿಗೆ ರಾಜ್ಯ ಮಂತ್ರಿಗಳು).—ಅ) ಹೌದು.

ಆ) ನಷ್ಟಕ್ಕೆ ಮುಖ್ಯವಾದ ಕಾರಣಗಳಾವುವೆಂದರೆ 1. ಸಾರಿಗೆ ವೆಚ್ಚವು ಅಧಿಕವಾಗಿರುವುದರಿಂದ ಸಿಬ್ಬಂದಿ ವರ್ಗಕ್ಕೆ ತುಟ್ಟಿ ಭತ್ಯೆಗಳನ್ನು ಆಗಿಂದಾಗ್ಗೆ ಸರಕಾರಿ ನೌಕರರಿಗೆ ಸಮಾನಾಗಿ ಮಂಜೂರು ಮಾಡಿರು